ಉದ್ದೇಶಪೂರ್ವಕವಾಗಿಯೇ ನಡೆಯುತ್ತಿವೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಉತ್ತರವಿಲ್ಲ)

ಶ್ರೀ ಎ. ಮುನಿಯಪ್ಪ.—ಮುನಿಸಿಪಲ್ ಪ್ರೆಸಿಡೆಂಟರು ಅನಧಿಕೃತವಾಗಿ ಎಷ್ಟು ಖರ್ಚು ಮಾಡಬಹುದು?

ಶ್ರೀ ಟಿ. ಚನ್ನಯ್ಯ.—ಕಾನೂನು ಪ್ರಕಾರ ಎಷ್ಟು ಖರ್ಚುಮಾಡುವುದಕ್ಕೆ ಅಧಿಕಾರವಿದೆಯೋ ಅಷ್ಟು ಖರ್ಚು ಮಾಡಬಹುದು. ಅನಿವಾರ್ಯವಾಗಿ ಖರ್ಚುಮಾಡಿರುವುದೇನಾದರೂ ಸರ್ಕಾರದ ಗಮನಕ್ಕೆ ಬಂದರೆ ಸೂಕ್ತ ಕ್ರಮ ತಗೆದುಕೊಂಡು, ಸರಿಯಾದ ರೀತಿಯಲ್ಲಿ ಖರ್ಚು ಮಾಡುವಂತೆ ಸೂಚನೆ ಕೊಡುತ್ತೇವೆ.

ಶ್ರೀ ಎ. ಮುನಿಯಪ್ಪ.—ಪ್ರೆಸಿಡೆಂಟರ ಕೈಗಳಿಗೆ ಜಿಲ್ಲಾ ಆಫೀಸರುಗಳಿರುವುದರಿಂದ ಇಂಥ ಅಕ್ರಮಗಳು ನಡೆಯುವುದಕ್ಕೆ ಅವಕಾಶವಾಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಚನ್ನಯ್ಯ.—ಇಲ್ಲ. ಸರ್ಕಾರದವರ ಗಮನಕ್ಕೆ ಆಗಾಗ್ಗೆ ಬರುತ್ತಿದೆ. ಬಂದಾಗಲೆಲ್ಲಾ ಸೂಕ್ತ ಕಾರ್ಯಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಎ. ಮುನಿಯಪ್ಪ.—ಪ್ರತಿ ವರ್ಷವೂ ಮುನಿಸಿಪಾಲಿಟಿಗಳ ಲೆಕ್ಕಪತ್ರಗಳನ್ನು ಸರಿಯಾಗಿ ಆಡಿಟ್ ಮಾಡಿ ನಿರಾಕರಿಸುವುದರಿಂದ ಇಂಥ ಅವಿವೇಕಗಳು ಸ್ವಾಭಾವಿಕವಲ್ಲವೇ?

ಶ್ರೀ ಟಿ. ಚನ್ನಯ್ಯ.—ಕೆಲವು ಮುನಿಸಿಪಾಲಿಟಿಗಳ ಲೆಕ್ಕಪತ್ರಗಳನ್ನು ಆಡಿಟ್ ಮಾಡಲಾಗಿದೆ. ನಮಗೆ ಸಾಕಾದಷ್ಟು ಸಿಬ್ಬಂದಿಯಿಲ್ಲದಿರುವುದರಿಂದ ಎಲ್ಲ ಮುನಿಸಿಪಾಲಿಟಿಗಳನ್ನೂ ಆಡಿಟ್ ಮಾಡಲು ಸಾಧ್ಯವಾಗಿಲ್ಲ. ಈಚೆಗೆ ಸಾಕಷ್ಟು ಸಿಬ್ಬಂದಿ ನೇಮಿಸಿ ಎಲ್ಲಾ ಮುನಿಸಿಪಾಲಿಟಿಗಳ ಲೆಕ್ಕಪತ್ರಗಳನ್ನು ಆಡಿಟ್ ಮಾಡಲು ಏರ್ಪಾಡುಮಾಡಲಾಗಿದೆ.

Disposal of shop sites along M. G. Road margin of Chintamani Town.

Q.—626. Sri M. C. ANJANEYA REDDY (Chintamani):—

Will the Government be pleased to state :—

(*a*) the number of shop sites along the M. G. Road margin of Chintamani Town disposed of by the Municipality during the last five years ;

(*b*) the average price per sq. yard realised by this sale?

A.—Sri T. CHANNIAH (Minister for Public Health and Local Self-Government) :—

(*a*) Forty-three sites.

(*b*) Rs. 102-8-0 per square yard.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—(*b*) ಪ್ರಶ್ನೆಯ ಉತ್ತರದಲ್ಲಿ ಚ.ಗ. ಒಂದಕ್ಕೆ 102 ರೂ. 8 ಆಣೆ ಗಳಷ್ಟು ಬೆಲೆಬಾಳುತ್ತದೆಂದು ಹೇಳಿದ್ದೀರಿ. ಇಂಥ ಬೆಲೆಬಾಳುವ ಜಮೀನನ್ನು ಒಬ್ಬ ಸಾಹುಕಾರರಿಗೆ ಚ.ಗ.ಕ್ಕೆ ಐದು ರೂಪಾಯಿಗಿಂತಲೂ ಕಮ್ಮಿ ಕಿಮ್ಮತ್ತಿಗೆ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚೆನ್ನಯ್ಯ.—ಕೊಟ್ಟಿಲ್ಲ. ಅವರು encroach ಮಾಡಿಕೊಂಡಿರುವ ಮುನಿಸಿಪಲ್ ನಿವೇಶನವನ್ನು ಅವ್ಸೆಟ್ ದರಕ್ಕೆ ಕೊಡಬೇಕೆಂದು ಹೇಳಿ, ಕೇಳಿಕೊಂಡಿದ್ದರು. ಈಗ ಹಾಗೆ ಕೊಡಕೂಡದೆಂದು stay order ಕೊಟ್ಟಿದ್ದೇವೆ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಈಗ stay ಮಾಡಿದ ಮೇಲೆ ಹರಾಜಿಗಿಟ್ಟು ಏನೇ ಮಾಡುತ್ತೀರಾ?

ಅಧ್ಯಕ್ಷರು.—'Stay' ಮಾಡಿರುವ ಉದ್ದೇಶವೇ ಅದು.

Mr. SPEAKER.—Questions Nos. 339 and 438 may be taken up together.

Construction of a new tank bund near Challaghatta.

Q.—339. Sri A. V. NARASIMHA REDDY (Bangalore South) :—

Will the Government be pleased to state :—

(*a*) when the estimate to construct a new tank bund near Challaghatta, Kengeri Hobli, Bangalore South Taluk, was prepared ;

(*b*) the number of estimated acres that would come under irrigation ;

(*c*) the number of dry lands that go under tank bed if the tank is constructed ?

(*d*) the estimated cost of the tanks ;

(*e*) the percentage of annual return that they get if the tank is constructed ?

A.—Sri Kadidal MANJAPPA (Minister for Revenue and Public Works) :—

(*a*) The estimate was prepared during the year 1947.

(*b*) The proposed atchkat under the tank is 157 acres.

(*c*) Dry lands—56 acres and 26 guntas and wet and garden lands—5 acres.

(*d*) The revised estimate will now amount to Rs. 2;13;600.

(*e*) The percentage of return is 0.55 per cent.